ವಿಶಾಖ ಎನ್.

# ದೇಹತೂಕ ಏರಿಳಿತದ ಪಡಿಪಾಟಲು

ಪಾತ್ರಗಳಿಗೆ ತಕ್ಕಂತೆ ದೇಹಾಕಾರವನ್ನು ವಿಪರೀತ ಬದಲಿಸಿಕೊಳ್ಳುವುದು ಎಲ್ಲರಿಗೂ ಸಾಧ್ಯ ಇಲ್ಲ. ಹಾಲಿವುಡ್‌ನಲ್ಲಿ ಕ್ರಿಸ್ಟಿಯನ್ ಬೇಲ್ ಹಲವು ಬಾರಿ ಪಾತ್ರಗಳಿಗಾಗಿ ತೂಕ ಇಳಿಸಿಕೊಂಡು, ಹೆಚ್ಚಿಸಿಕೊಂಡು ಸುದ್ದಿಯಾಗಿದ್ದರು.

ಸದಾಕಾಲ ಸಿಕ್ಸ್ ಪ್ಯಾಕ್ ಉಳಿಸಿಕೊಳ್ಳುವ ನಟರ ಕತೆ ಬೇರೆ, ಈ ರೀತಿ ವಿಪರೀತ ಕೃಶರಾಗುವ ಅಥವಾ ಬೊಜ್ಜು ಬೆಳೆಸಿಕೊಳ್ಳುವವರ ಸ್ಥಿತಿ ಬೇರೆ. 'ದಂಗಲ್' ಸಿನಿಮಾದಲ್ಲಿ ಅಮೀರ್ ಖಾನ್ ಬೊಜ್ಜು ಬರಿಸಿಕೊಂಡು, ಮತ್ತೆ ತೆಳ್ಳಗೆ ಆಗಿದ್ದನ್ನು ಕಂಡಿದ್ದೆವು. 'ಗಜಿನಿ' ಚಿತ್ರದಲ್ಲಿ ಅವರ ಏಯ್ಟ್ ಪ್ಯಾಕ್ ಕಂಡವರಿಗೂ ಆ ರೀತಿ ಸ್ನಾಯು ರೂಪಿಸುವ ಕಷ್ಟ ಎಂಥದು ಎನ್ನುವುದು ಗೊತ್ತು. 'ಸಂಜು' ಸಿನಿಮಾದಲ್ಲಿ ರಣಬೀರ್ ಕಪೂರ್ ದೇಹದ ತೂಕ ಹೆಚ್ಚಿಸಿಕೊಳ್ಳಲು ಇನ್ನಿಲ್ಲದಂತೆ ಪ್ರಯತ್ನಪಟ್ಟಿದ್ದರು.

ರಣದೀಪ್ ಹೂಡ ಕೂಡ ಈಗ ದೇಹಾಕಾರ ಬದಲಿಸಿಕೊಂಡ ಕಾರಣಕ್ಕೆ ಸುದ್ದಿಯಲ್ಲಿದ್ದಾರೆ. ಅವರು ನಿರ್ದೇಶಿಸಿ, ನಟಿಸಿ, ಒಂದಿಷ್ಟು ಬಂಡವಾಳ ಕೂಡ ತೊಡಗಿಸಿದ ಸಿನಿಮಾ 'ಸ್ವಾತಂತ್ರ್ಯ ಸೇನಾನಿ ವೀರ್ ಸಾವರ್ಕರ್'. ಯಾವ ಕಾಲಾಪಾನಿಯಲ್ಲಿ ಸಾವರ್ಕರ್ ಶಿಕ್ಷೆ ಅನುಭವಿಸಿದ್ದರೋ ಅಲ್ಲಿಗೆ ಹೋಗಿ ಪರಿಸ್ಥಿತಿ ಆಗ ಹೇಗಿದ್ದಿರಬಹುದು ಎಂಬುದನ್ನು ಕೂಡ ಊಹಿಸಿಕೊಂಡರು. ಆಮೇಲೆ ಸಾವರ್ಕರ್ ಬಗೆಗಿನ ಪುಸ್ತಕಗಳನ್ನು ಓದಿಕೊಂಡರು.

ಇಷ್ಟೆಲ್ಲ ಹೋಂವರ್ಕ್ ಮಾಡಿದ ನಂತರ ಸಾವರ್ಕರ್ ರೀತಿಯಲ್ಲೇ ಕೃಶರಾಗುವುದು ಮುಖ್ಯ ಎಂದು ಅವರಿಗೆ ಅನಿಸಿತು. ದೇಹತೂಕವನ್ನು ಸಾಕಷ್ಟು ಕಡಿಮೆ ಮಾಡಿಕೊಂಡರು. ತೆರೆ ಮೇಲೆ ಅವರ ಕೃಶ ದೇಹ ನೋಡಿದರೆ ಎಂಥವರೂ ಬೆರಗಾಗಬೇಕು.

ರಣದೀಪ್ ಹೂಡ ದೇಹದ ತೂಕ ಕಡಿಮೆ ಮಾಡುತ್ತಿರುವುದು ಇದೇ ಮೊದಲೇನೂ ಅಲ್ಲ. 'ಸೊರಬ್ಜಿತ್' ಚಿತ್ರದ ಪ್ರಮುಖ ಪಾತ್ರಕ್ಕಾಗಿ ಹದಿನೆಂಟು ಕೆ.ಜಿ. ತೂಕವನ್ನು ವರ್ಷಗಳ ಹಿಂದೆಯೂ ಇಳಿಸಿಕೊಂಡಿದ್ದರು.

'ನನಗೆ ಸಾವರ್ಕರ್ ವಿಷಯ ಅಷ್ಟೇನೂ ಗೊತ್ತಿರಲಿಲ್ಲ. ಅವರು ಕಾಲಾಪಾನಿಯಲ್ಲಿ ಶಿಕ್ಷೆ ಅನುಭವಿಸಿದ್ದರು ಎನ್ನುವುದಷ್ಟೆ ತಿಳಿದಿತ್ತು. ಅವರ ಕುರಿತು ಯಾರೇ ಮಾತನಾಡಿದರೂ ವಿವಾದ ಆಗುತ್ತಿದ್ದುದನ್ನು ಗಮನಿಸಿದ್ದೆ. ಅವರ ಕುರಿತ ಹಲವು ಪುಸ್ತಕಗಳನ್ನು ಓದಲು ಆರಂಭಿಸಿದೆ. ಆಮೇಲೆ ಸಾಕಷ್ಟು ಒಳನೋಟಗಳು ದೊರೆತವು. ಅದೇ ಕಾರಣಕ್ಕೆ ಅವರ ವ್ಯಕ್ತಿಚಿತ್ರವನ್ನು ಕಟ್ಟಿಕೊಡುವ ಸಿನಿಮಾ ಮಾಡಲು ನಾನು ನಿರ್ಧರಿಸಿದ್ದು. ಈ ಪಾತ್ರ ನಿರ್ವಹಿಸಲು ನಾನು ಎಷ್ಟು ಕಷ್ಟಪಟ್ಟಿದ್ದೇನೆ ಎನ್ನುವುದು ನನಗಷ್ಟೆ ಗೊತ್ತು' ಎಂದು ರಣದೀಪ್ ಹೂಡ ಹೇಳಿದರು.



ಸಾವರ್ಕರ್ ಪಾತ್ರಕ್ಕಾಗಿ ರಣದೀಪ್ ಹೂಡ ದೇಹಾಕಾರ ಬದಲಿಸಿಕೊಂಡಿದ್ದು ಹೀಗೆ

ಇಷ್ಟೆಲ್ಲ ಕಷ್ಟಪಟ್ಟರೂ ಸಾವರ್ಕರ್ ಸಿನಿಮಾ ಬಾಕ್ಸ್‌ಆಫೀಸ್ ಕಲೆಕ್ಷನ್‌ನಲ್ಲಿ ಮಂಕಾಗಿದೆ.



ಕಂಗನಾ

# ಈಗ ಕಂಗನಾ ಹೀಗೆ... ಆಗ ಹಾಗೆ...

ಕಾಂಗ್ರೆಸ್ ನಾಯಕಿ ಸುಪ್ರಿಯಾ ಶ್ರೀನೇತ್ ಅವರ ಸಾಮಾಜಿಕ ಮಾಧ್ಯಮದ ಖಾತೆಯಲ್ಲಿ ಕಂಗನಾ ರನೌತ್ ಅವರನ್ನು ಹಂಗಿಸುವ ಪೋಸ್ಟ್ ಒಂದು ಕಾಣಿಸಿಕೊಂಡಿತ್ತು. ಹಿಮಾಚಲ ಪ್ರದೇಶದ ಮಂಡಿ ಕ್ಷೇತ್ರದಿಂದ ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ಕಂಗನಾ ಅವರಿಗೆ ಬಿಜೆಪಿ ಟಿಕೆಟ್ ನೀಡಿದ ಕೆಲವೇ ಗಂಟೆಗಳ ನಂತರ ಇಂತಹುದೊಂದು ಪೋಸ್ಟ್ ಸದ್ದು ಮಾಡಿತ್ತು. ಅದನ್ನು ಅನೇಕರು ಟೀಕಿಸಿದ್ದರು. ಖುದ್ದು ಕಂಗನಾ ಅದನ್ನು ಟೀಕಿಸಿದ್ದೇ ಅಲ್ಲದೆ, ತಾವು ನಿರ್ವಹಿಸಿರುವ ವೈವಿಧ್ಯಮಯ ಪಾತ್ರಗಳನ್ನು ಉದಾಹರಣೆಯಾಗಿ ನೀಡಿ, ಅಭಿನಯದಲ್ಲಿನ ತಮ್ಮ ಬದ್ಧತೆಯ ಮೇಲೆ ಬೆಳಕು ಚೆಲ್ಲಿದ್ದರು.

ತಮ್ಮ ಖಾತೆಯನ್ನು ಬಳಸಿ ಯಾರೋ ತಮ್ಮ ಗಮನಕ್ಕೇ ತಾರದೆ ಮಾಡಿರುವ ಪೋಸ್ಟ್ ಅದು ಎಂದು ಸ್ಪಷ್ಟನೆ ನೀಡಿದ ಸುಪ್ರಿಯಾ ಶ್ರೀನೇತ್, ಆಮೇಲೆ ಪೋಸ್ಟ್ ಅನ್ನು ಡಿಲೀಟ್ ಮಾಡಿದರು. ತಮ್ಮ ಸಾಮಾಜಿಕ ಮಾಧ್ಯಮಗಳ ಖಾತೆಗಳನ್ನು ಕೆಲವರು ನಿಭಾಯಿಸುವುದರಿಂದ ಯಾರೋ ಹಾಕಿದ್ದ ಪೋಸ್ಟ್ ತೆಗೆದು ಕಾಪಿ–ಪೇಸ್ಟ್ ಮಾಡಿದ್ದರಿಂದ ಈ ರೀತಿಯ ಅಚಾತುರ್ಯ ಆಗಿದೆ ಎನ್ನುವ ಶೈಲಿಯಲ್ಲಿ ಅವರು ಸ್ಪಷ್ಟನೆ ಕೊಟ್ಟರು.

ಈಗ ಕಂಗನಾ ವಿಷಯದಲ್ಲಿ ಹೀಗೆ ಆಗಿದೆ. 2020ರಲ್ಲಿ ಇದೇ ನಟಿ ಇನ್ನೊಬ್ಬ ನಟಿ ಊರ್ಮಿಳಾ ಮಾತೋಂಡ್ಕರ್ ಅವರ ವಿಷಯದಲ್ಲಿ ಲಘುವಾಗಿ ಮಾತನಾಡಿದ್ದರು. ಮಾತಿನ ಸೂಕ್ಷ್ಮಗಳ ಕುರಿತು ಚರ್ಚೆ ನಡೆಸುತ್ತಿರುವ ಕೆಲವರು ಆಗ ಕಂಗನಾ ಆಡಿದ್ದ ಮಾತನ್ನೂ ನೆನಪಿಸುತ್ತಿದ್ದಾರೆ.

'ಊರ್ಮಿಳಾ ಮಾತೋಂಡ್ಕರ್ ಅವರಂತಹ ಸಾಫ್ಟ್ ಪೋರ್ನ್ ಚಿತ್ರಗಳ ನಟಿಗೆ ರಾಜಕೀಯ ಪಕ್ಷದಿಂದ ಸ್ಪರ್ಧಿಸಲು ಟಿಕೆಟ್ ಸಿಗುವಾಗ ನನಗೆ ಯಾಕೆ ಸಿಗಕೂಡದು' ಎಂಬರ್ಥದ ಪೋಸ್ಟ್ ಒಂದನ್ನು ಆಗ ಕಂಗನಾ ಮಾಡಿದ್ದರು. ಆ ಸಂದರ್ಭದಲ್ಲಿ ನಟಿ ಸ್ವರಾ ಭಾಸ್ಕರ್ ಸೇರಿದಂತೆ ಕೆಲವರು ಊರ್ಮಿಳಾ ಅವರು ಚಿತ್ರರಂಗಕ್ಕೆ ನೀಡಿರುವ ಕೊಡುಗೆಯನ್ನು ಮೆಲುಕುಹಾಕಿ, ಸಮರ್ಥನೆಯ ಪೋಸ್ಟ್‌ಗಳನ್ನು ಮಾಡಿದ್ದರು. ಆ ಕಾಲಘಟ್ಟದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದ ಊರ್ಮಿಳಾ ಕಾಲಾನಂತರ ಶಿವಸೇನಾ ಕಡೆಗೆ ವಾಲಿದ್ದರು.



ಊರ್ಮಿಳಾ